<u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 246(174)
ಸದಸ್ಯರ ಹೆಸರು : ಶ್ರೀ ಕಿಶೋರ್ ಕುಮಾರ್ ಪುತ್ತೂರು (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 12.08.2025
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಂದ ಸ್ಥಳೀಯ ನಗರ ಯೋಜನ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ನಂತರ ಸದರಿ ವಿನ್ಯಾಸ ಅನುಮೋದನ ಕೋರಿ ಸಲ್ಲಿಕೆಯಾದ ಅರ್ಜಿಗಳು ಅನುಮೋದನ ನೀಡಿದ ತಿರಸ್ಕರಿಸಿದ ಮತ್ತು ಬಾಕಿ ಇರುವ ಅರ್ಜಿಗಳು ಎಷ್ಟು; ಅರ್ಜಿಗಳನ್ನು ತಿರಸ್ಕರಿಸಿದ್ದಲ್ಲಿ ಇದ್ದ ಕಾರಣಗಳೇನು; (ವಿವರ ನೀಡುವುದು)</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಏಕ ನಿವೇಶನ ವಿನ್ಯಾಸ ನಕ್ಷೆ ಅನುಮೋದನೆ ಅಧಿಕಾರವನ್ನು ಗ್ರಾಮ ಪಂಚಾಯಿತಿಗಳಿಂದ ಸ್ಥಳೀಯ ನಗರ ಯೋಜನೆ ಪ್ರಾಧಿಕಾರಗಳಿಗೆ ಹಸ್ತಾಂತರಿಸಿದ ನಂತರ ಸದರಿ ವಿನ್ಯಾಸ ಅನುಮೋದನೆ ಕೋರಿ ಸಲ್ಲಿಕೆಯಾದ ಅರ್ಜಿಗಳ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ(ವಿವರಗಳನ್ನು ಅನುಬಂಧ-1 ರಲ್ಲಿರಿಸಿದೆ).
<table>
<tr><th>ಸಲ್ಲಿಕೆಯಾದ ಒಟ್ಟು ಅರ್ಜಿಗಳ</th><th>ಅನುಮೋದನೆ ನೀಡಿದ ಪ್ರಕರಣಗಳ ಸಂಖ್ಯೆ</th><th>ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ</th><th>ಹಿಂಬರಹ / ವಿಲೇ ಮಾಡಿದ ಪ್ರಕರಣಗಳ ಸಂಖ್ಯೆ</th><th>ಬಾಕಿ ಇರುವ ಪ್ರಕರಣಗಳ ಸಂಖ್ಯೆ</th></tr>
<tr><td>9543</td><td>5691</td><td>1061</td><td>1880</td><td>911</td></tr>
</table></td></tr>
<tr><td>(ಆ)</td><td>ಸದರಿ ಜಿಲ್ಲೆಗಳ ಎಲ್ಲಾ ನಗರ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಮಂಜೂರಾದ ಮತ್ತು ಭರ್ತಿಗೊಂಡ ಪ್ರಸ್ತುತ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳ ವಿವರ ನೀಡುವುದು; ಖಾಲಿ ಇರುವ ಹುದ್ದೆಗಳನ್ನು ಈವರೆಗೂ ಭರ್ತಿಗೊಳಿಸದಿರಲು ಕಾರಣಗಳೇನು;</td><td>ಸದರಿ ಜಿಲ್ಲೆಗಳ ಎಲ್ಲಾ ನಗರ ಸ್ಥಳೀಯ ಯೋಜನಾ ಪ್ರಾಧಿಕಾರಗಳಿಗೆ ಮಂಜೂರಾದ ಮತ್ತು ಭರ್ತಿಗೊಂಡ ಪ್ರಸ್ತುತ ಖಾಲಿ ಇರುವ ವಿವಿಧ ವೃಂದಗಳ ಹುದ್ದೆಗಳ ವಿವರವನ್ನು ಅನುಬಂಧ-2 ರಲ್ಲಿರಿಸಿದೆ.<br><br>ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸನೆನಿ 2024, ದಿನಾಂಕ 11.04.2025 ರಲ್ಲಿ "ದಿನಾಂಕ:28.10.2024 ರಿಂದಲೇ ಅನ್ವಯವಾಗುವಂತೆ ನೇರ ನೇಮಕಾತಿಗಾಗಿ ಅಥವಾ ಬ್ಯಾಕ್ ಲಾಗ್ ಹುದ್ದೆಗಳ ಭರ್ತಿಗಾಗಿ ಯಾವುದೇ ಹೊಸ ಅಧಿಸೂಚನೆಗಳನ್ನು ಹೊರಡಿಸಿದ್ದಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಪಡಿಸಲು ಸೂಚಿಸಿರುತ್ತದೆ".<br><br>ಅದರಂತೆ, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಯಿಂದ ಪ್ರಸ್ತಾಪಿಸಿರುವ ನೇರ ನೇಮಕಾತಿ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿರುತ್ತದೆ.</td></tr>
<tr><td>(ಇ)</td><td>ಸದರಿ ಪ್ರಾಧಿಕಾರಗಳಲ್ಲಿ ವಿನ್ಯಾಸ ಅನುಮೋದನೆಗೆ ಸಲ್ಲಿಕೆಯಾಗುವ ಅರ್ಜಿಗಳ ನಕ್ಷೆಯನ್ನು ಐದರಿಂದ ಆರು ಬಾರಿ ಪರಿಷ್ಕರಿಸುವುದು ಮಧ್ಯವರ್ತಿಗಳ ಮೂಲಕ ಸಲ್ಲಿಕೆಯಾದ ಕಡತಗಳಿಗೆ ಮಾತ್ರ ಅನುಮೋದನೆ ನೀಡುವುದು ಅರ್ಜಿಗಳ</td><td>ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದ್ದರೂ ಸಹ ನಿಯಮಾನುಸಾರವಿರುವ ಅರ್ಜಿಗಳನ್ನು ನಿಗದಿತ ಕಾಲಾವಧಿಯಲ್ಲಿ ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಮುಂದುವರೆದು, ಕರ್ನಾಟಕ ಸರ್ಕಾರದ ಹೊಸ ಸೇವೆಗಳ ಸೇರ್ಪಡೆ ಅಧಿಸೂಚನೆ ಸಂಖ್ಯೆ:ಸಿಆಸುಇ 12 ಎಸ್‌ಎಸ್‌ಎಂ 2025</td></tr>
</table>



ile No. UDD/359/MYAP/2025-MYS-Urban Development Department (Computer No. 1862465)

| | | |
|---|---|---|
| | ವಿಲೇವಾರಿಯಲ್ಲಿ FIFO (First in First out) ಪಾಲಿಸದಿರುವುದು ಮುಂತಾದ ಸಮಸ್ಯೆಗಳಿರೋದು ಸರ್ಕಾರದ ಗಮನಕ್ಕೆ ಬಂದಿದೆಯೇ; | ದಿನಾಂಕ:01.07.2025 ರಲ್ಲಿ ರಾಜ್ಯದ ಎಲ್ಲಾ ನಗರಾಭಿವೃ ಪ್ರಾಧಿಕಾರಗಳು ಸ್ವತಂತ್ರ ಯೋಜನಾ ಪ್ರಾಧಿಕಾರಗಳು ಹಾ ಮುನಿಸಿಪಲ್ ಯೋಜನಾ ಪ್ರಾಧಿಕಾರಗಳ ವ್ಯಾಪ್ತಿಯಲ್ಲಿ ವಿನ್ಯಾ ಅನುಮೋದನೆ ಪ್ರಕ್ರಿಯೆಯನ್ನು ಕರ್ನಾಟಕ ಸರ್ಕಾರವು ಸಕಾ ಯೋಜನೆಯಡಿ ವಿನ್ಯಾಸ ಅನುಮೋದನೆ ನೀಡಲು ಹೊ ಸೇವೆಗಳನ್ನು ಸೇರ್ಪಡೆಗೊಳಿಸಿ ಹಾಗೂ ಸದರಿ ಸೇವ ಅರ್ಜಿಯನ್ನು ಇತ್ಯರ್ಥಗೊಳಿಸಲು 90 ದಿನಗಳ ಕಾಲಮಿತಿಯನ್ನು ನಿಗಧಿಪಡಿಸಿ ಆದೇಶಿಸಿದೆ.<br>ಅದರಂತೆ, ನಿಗಧಿತ ದಾಖಲೆಗಳೊಂದಿಗೆ ಸಲ್ಲಿಸಿರುವ ಅರ್ಜಿಗಳನ್ನು ನಿಯಮಾನುಸಾರ ಕಾಲಮಿತಿಯಲ್ಲಿ ವಿಲೇಗೊಳಿಸಲು ಕ್ರಮವಹಿಸಲಾಗುತ್ತಿದೆ. |
| (ಈ) | ಸದರಿ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಟ್ಟಡ ಲೈಸೆನ್ಸ್ ನೀಡಲು ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಕೋರಿ ಸಲ್ಲಿಕೆ ಆಗಿರುವ ಅರ್ಜಿಗಳು ಮತ್ತು ಅನುಮೋದನೆ ನೀಡಲು ಬಾಕಿ ಇರುವ ಅರ್ಜಿಗಳು ಎಷ್ಟು; ಈವರೆಗೆ ಎಷ್ಟು ಅರ್ಜಿಗಳಿಗೆ ತಾಂತ್ರಿಕ ಅನುಮೋದನೆ ನೀಡಲಾಗಿದೆ? (ವಿವರ ನೀಡುವುದು) | ಸದರಿ ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಕಟ್ಟಡ ಲೈಸೆನ್ಸ್ ನೀಡಲು ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ಕೋರಿ ಸಲ್ಲಿಕೆ ಆಗಿರುವ ಅರ್ಜಿಗಳು ಮತ್ತು ಅನುಮೋದನೆ ನೀಡಲು ಬಾಕಿ ಇರುವ ವಿವರವನ್ನು ಈ ಕೆಳಕಂಡಂತೆ ನೀಡಲಾಗಿದೆ(ವಿವರಗಳನ್ನು **ಅನುಬಂಧ-3** ರಲ್ಲಿರಿಸಿದೆ). |

| ಸಲ್ಲಿಕೆಯಾದ ಒಟ್ಟು ಅರ್ಜಿಗಳ | ಅನುಮೋದನ ನೀಡಿದ ಪ್ರಕರಣಗಳ ಸಂಖ್ಯೆ | ತಿರಸ್ಕರಿಸಿದ ಪ್ರಕರಣಗಳ ಸಂಖ್ಯೆ | ಹಿಂಬರಹ / ವಿಲೇ ಮಾಡಿದ ಪ್ರಕರಣಗಳ ಸಂಖ್ಯೆ | ಬಾಕಿ ಇರುವ ಪ್ರಕರಣಗಳ ಸಂಖ್ಯೆ |
|---|---|---|---|---|
| 71 | 13 | - | 42 | 16 |

ಕಡತ ಸಂಖ್ಯೆ: ನಅಇ 359 ಮೈಅಪ್ರಾ 2025

**(ಬಿ.ಎಸ್.ಸುರೇಶ)**

ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು.